


**ಎಡದಿಂದ ಬಲಕ್ಕೆ**

1. ಹಲಪರಿಯ ಹಣ್ಣುಗಳನ್ನು ಬೆರೆಸಿದ ಲಘು ಊಟ 4
3. ಹದ್ದು ಮೀರಿದವರ ದುರಹಂಕಾರವನ್ನು ಮುರಿದ ವೀರ, ಧೈರ್ಯಶಾಲಿ 3
4. ಹೊನ್ನಿನಾಸೆಗೆ ಅನ್ಯಾಯ ಮಾಡಿದ್ದಕ್ಕೆ ಬರೀ ಅವಮಾನ 3
6. ಅವಳ ಆಗಮನದ ಜೊತೆಗೇ ತೇಲಿಬಂತು ಪರಿಮಳ 4
7. ಕೂಗಿದರೆ ಕೇಳಿಸುವಷ್ಟೇ ದೂರ ಅದಾವ ಅಳತೆ? 4
9. ಕಾರ್ಗತ್ತಲಿನಿಂದ ಕರಾಳವಾಗಿತ್ತು ಹಗಲಿನ ನಂತರದ ಸಮಯ 4
11. ಚಿರಕಾಲ ಬದುಕಬೇಕೆಂಬುದು ಆತನ ಎಣಿಕೆ 4
13. ಗೊತ್ತಿಲ್ಲದೇನಿಲ್ಲ; ಅದೆಲ್ಲ ಕಳೆದುಹೋಗಿರುವ ಸಮಯ 4
15. ಮನಸ್ಸಿಗೇ ಬಿಸಿ ಹತ್ತಿತೆಂದರೆ ದ್ವೇಷ, ಜಗಳ ಖಂಡಿತ ತಾನೇ? 4
17. ಮೂರೆಣಿಸುವುದರೊಳಗೇ ಪ್ರತ್ಯಕ್ಷಳಾದಳು ಸುಂದರಿ 3
18. ವರ್ಣವೇನೇ ಇರಲಿ, ರುಚಿ ನೋಡಿದರೆ ಉಪ್ಪೇ ಇದ್ದಿರಬೇಕು 3
19. ಒಪ್ಪತ್ತಿಗೇ ಕಷ್ಟವಾಗಿರುವಾಗ ಮೆತ್ತನೆಯ ಹಾಸಿಗೆ ಹೇಗೆ? 4

**ಮೇಲಿನಿಂದ ಕೆಳಕ್ಕೆ**

1. ಈ ಹೊನ್ನಿನ ರಾಶಿಗೆ ಕಾವಲಿರುವುದೇ ಮಹಾಸರ್ಪ? 3
2. ಭಾರೀ ಹಿರಿಮೆ ಗಳಿಸಿರುವ ಮುಸ್ಲಿಂ ಸಂತ ಗೊತ್ತೇ? 3
3. ಹಾಳಾಗುವ ಭಯದಲ್ಲಿದೆ ಕಡಲಿನ ಈ ಸುಣ್ಣ ನಿರ್ಮಿತಿ 3
5. ಮಳೆಯಲ್ಲೇ ಕಾರ್ಯನಿರತವಾಗಿರುವ ಈ ಜೋಡಿ ನೋಡಿ 3
7. ಕಂಡ ಕಂಡದ್ದೆಲ್ಲ ಸಿಗುವಂತಿರಬೇಕು ಕೇಳಿದ ತಕ್ಷಣ 3
8. ಪತ್ತೆಯೇ ಇಲ್ಲದಂತೆ ಪರ ಊರಿಗೆ ಹೋದನೇ ಮಹಾ ಪೆದ್ದ? 3
9. ಕಳ್ಳರ ಜೊತೆಗೇ ನಡೆಯಿತು ಭಾರೀ ಯುದ್ಧ 3
10. ಮುಂಜಾನೆ, ಮಧ್ಯಾಹ್ನ, ಸಂಜೆ ಮೂರೂ ಸಮಯ 3
12. ಚಂದ ಇರಲಿ ಬಿಡಲಿ, ಇದಂತೂ ಚೂಡಿದಾರದ ಮೇಲುಹೊದಿಕೆ 3
14. ಸದಾ ತಣ್ಣಗಿರುವ ಭೂ ಪ್ರದೇಶದವನು ಈ ಯುವಕ 3
15. ನೂರೆಣಿಸುವುದರಲ್ಲಿ ಸೋಲನ್ನೊಪ್ಪುವಂತೆ ಮಾಡು 3
16. ಹಲ ಬಗೆಯ ಕೆಲಸಗಳಿಗೆ ಉಪಯುಕ್ತವಾಗುವ ಮರದ ಹಾಳೆ 3

---

### 15–02–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಪರಿಹಾಸ 3. ಸಮ್ಮತ 4. ಹಾರ್ಮೈಕೆ 6. ಅನುನಯ 8. ಸಂಕಲನ 10. ನಿರ್ಧಾರಿತ 12. ರಮಾಕಾಂತ 16. ಪುದೀನ 17. ನರ್ತಕ 18. ವಿತರಕ

**ಮೇಲಿನಿಂದ ಕೆಳಕ್ಕೆ**

1. ಪತನ 2. ಸಹಾಯ 3. ಸದನ 5. ಕೆಡುಕ 6. ಅಭಿಮಾನಿ 7. ಯಥೋಚಿತ 8. ಸಂಚಕಾರ 9. ನವನೀತ 11. ರಿಕಾಪು 13. ಮಾರ್ಜಕ 14. ಮನವಿ 15. ತನಕ

ಪ್ರಶ್ನಾಂಕಣ

# ಅಟ್ಲಾಂಟಿಕ್ ಅರಣ್ಯ; ಏನು ವಿಶೇಷ?

ಅಟ್ಲಾಂಟಿಕ್ ಅರಣ್ಯ; ಅದು ದಕ್ಷಿಣ ಅಮೆರಿಕ ಖಂಡದ ಪೂರ್ವ ಭಾಗದಲ್ಲಿ ಅಟ್ಲಾಂಟಿಕ್ ಮಹಾಸಾಗರದ ಕರಾವಳಿಯಲ್ಲಿ ಹರಡಿರುವ ಅರಣ್ಯ (ಚಿತ್ರ1ರಲ್ಲಿ ಬಾಣದ ಗುರುತು 'ಬಿ' ಸೂಚಿಸುತ್ತಿರುವ ಪ್ರದೇಶ). ದಕ್ಷಿಣ ಅಮೆರಿಕದಲ್ಲೇ ಇರುವ ಅತ್ಯಂತ ಪ್ರಸಿದ್ಧ ಅಮೆಜಾನ್ ಅರಣ್ಯಕ್ಕಿಂತ (ಚಿತ್ರ 1ರಲ್ಲಿ ಬಾಣ 'ಎ' ಮತ್ತು ಚಿತ್ರ 3) ಪ್ರಾಚೀನವಾದ ಮತ್ತು ಅಮೆಜೋನಿಯಾದಿಂದ ಸಂಪೂರ್ಣ ಪ್ರತ್ಯೇಕವಾದ ಅರಣ್ಯ ಪ್ರದೇಶ (ಚಿತ್ರ 2) ಇದು. ಮೂಲತಃ ಹತ್ತರಿಂದ ಹದಿನೈದು ಲಕ್ಷ ಚದರ ಕಿಲೋಮೀಟರ್ ವಿಸ್ತಾರ ಇದ್ದ ಈ ಅರಣ್ಯ ಮನುಷ್ಯರ ಆಕ್ರಮಣಕಾರೀ ಹಸ್ತಕ್ಷೇಪದಿಂದ ಪ್ರಸ್ತುತ ಕೇವಲ ಒಂದು ಲಕ್ಷ ಚದರ ಕಿಲೋಮೀಟರ್ ವೈಶಾಲ್ಯಕ್ಕೆ ಕುಸಿದಿದೆ. ಈ ಅರಣ್ಯದ ಶೇ. 92ರಷ್ಟು ಪ್ರದೇಶ ಬ್ರೆಜಿಲ್ ದೇಶದ ಪೂರ್ವ ಭಾಗದಲ್ಲೂ, ಶೇ. 6ರಷ್ಟು ಭಾಗ ಪೆರುಗ್ವೇ ರಾಷ್ಟ್ರದ ಪೂರ್ವ ಭಾಗದಲ್ಲೂ, ಶೇ.2 ಭಾಗ ಅರ್ಜೆಂಟೀನಾ ದೇಶದ ಈಶಾನ್ಯ ಪ್ರದೇಶದಲ್ಲೂ ಉಳಿದಿದೆ.

ವಿಶೇಷ ಏನೆಂದರೆ, ಅಟ್ಲಾಂಟಿಕ್ ಅರಣ್ಯ ವಾಸ್ತವವಾಗಿ ಹದಿನೈದು ವಿಭಿನ್ನ ಬಗೆಗಳ ಜೀವಾವಾರಗಳಿಂದ ಕೂಡಿದೆ: ವೃಷ್ಟಿವನ, ಕಡಲಂಚಿನ ಕಾಡು, ಮ್ಯಾಂಗ್ರೂವ್ ಅಡವಿ ಇತ್ಯಾದಿ. ಆದರೆ ಪ್ರಸ್ತುತ ಈ ಅರಣ್ಯ ಯಾವ ಒಂದು ಪ್ರದೇಶದಲ್ಲೂ ಅವಿಚ್ಛಿನ್ನವಾಗಿ ಉಳಿದಿಲ್ಲ; ಯಾವ ಒಂದು ಸ್ಥಳದಲ್ಲೂ ಅದರ ವೈಶಾಲ್ಯ ಒಂದೆರಡು ಚದರ ಕಿಲೋಮೀಟರ್ ಮೀರಿಲ್ಲ. ಅಷ್ಟೆಲ್ಲ ಧ್ವಂಸವಾಗಿದ್ದರೂ ಅಟ್ಲಾಂಟಿಕ್ ಅರಣ್ಯದಲ್ಲಿ ವಿಪರೀತ ಜೀವಿವೈವಿಧ್ಯ ಇದೆ. ಅಲ್ಲಿ 3,000 ವೃಕ್ಷ ಪ್ರಭೇದಗಳೂ ಸೇರಿದಂತೆ 20,000 ಸಸ್ಯ ಪ್ರಭೇದಗಳಿವೆ (ಆ ಪೈಕಿ ಶೇ. 40ರಷ್ಟು ಪ್ರಭೇದಗಳು ಧರೆಯಲ್ಲಿ ಬೇರೆಲ್ಲೂ ಇಲ್ಲದ ಸ್ಥಳೀಯ ಪ್ರಭೇದಗಳೇ ಆಗಿವೆ). ಈ ಅರಣ್ಯದಲ್ಲಿ 2,000 ಕಶೇರುಕ ಪ್ರಭೇದಗಳಿವೆ (ಶೇ. 30 ಸ್ಥಳೀಯ); ಸ್ತನಿ ಪ್ರಭೇದಗಳು 298 (ಸ್ಥಳೀಯ ಪ್ರಭೇದಗಳು 90); ಹಕ್ಕಿ ಪ್ರಭೇದಗಳು 1023 (ಸ್ಥಳೀಯ ಪ್ರಭೇದಗಳು 200); ಉಭಯವಾಸಿ ಪ್ರಭೇದಗಳು 475 (ಸ್ಥಳೀಯ ಪ್ರಭೇದಗಳು 286); ಉರಗ ಪ್ರಭೇದಗಳು 306 (ಎಂಡೆಮಿಕ್ ಪ್ರಭೇದಗಳು 94). ಮತ್ತೊಂದು ವಿಶೇಷ ಏನೆಂದರೆ, ಬ್ರೆಜಿಲ್ ದೇಶದ ಎರಡು ಮಹಾ ನಗರಗಳಾದ ಸಾವೋ ಪಾಲೋ (ಜನಸಂಖ್ಯೆ 23 ದಶಲಕ್ಷ) ಮತ್ತು ರಿಯೋಡಿಜನ್ಹೈರೋ (ಜನಸಂಖ್ಯೆ 13 ದಶಲಕ್ಷ) ಈ ಅರಣ್ಯ ಪ್ರದೇಶದಲ್ಲೇ ಇವೆ!




ಅನಿಯಂತ್ರಿತ ಕೃಷಿ ಭೂಮಿ ವಿಸ್ತರಣೆ, ಮರಮುಟ್ಟು ಕಳ್ಳಸಾಗಣೆ ಮತ್ತು ಮಾನವ ವಸತಿ ವಿಸ್ತರಣೆಗಳಿಂದಾಗಿ ಈ ಅರಣ್ಯ ಅತ್ಯಂತ ಕ್ಷಿಪ್ರಗತಿಯಲ್ಲಿ ಕಳೆದುಹೋಗುತ್ತಿದೆ. ಆವಾಸ ನಾಶ ಮತ್ತು ವನ್ಯಮಾಂಸದ ಕಳ್ಳ ದಂಧೆಗಳಿಂದಾಗಿ ಇಲ್ಲಿನ 11,000 ಪ್ರಾಣಿ ಪ್ರಭೇದಗಳು ಅಳಿವ ಹಂತ ತಲುಪಿವೆ!

■ ಎನ್. ವಾಸುದೇವ್